ಲಕ್ಷಗಳ ಅನುದಾನದಲ್ಲಿ 6 ಕಾಮಗಾರಿಗಳನ್ನು ಕೈಗೊಂಡಿದ್ದು, ಇವು ಮುಕ್ತಾಯ ಹಂತದಲ್ಲಿರುತ್ತವೆ.

ನಬಾರ್ಡ್ ಯೋಜನೆಯಡಿ 2 ಕಾಮಗಾರಿಗಳನ್ನು ರೂ. 123.00 ಲಕ್ಷಗಳ ಅನುದಾನದಲ್ಲಿ ಕೈಗೊಂಡಿದ್ದು ಇವುಗಳು ಮುಕ್ತಾಯ ಹಂತದಲ್ಲಿರುತ್ತವೆ.

13ನೇ ಹಣಕಾಸು ಆಯೋಗದ ಅಡಿಯಲ್ಲಿ ರೂ. 58.58 ಲಕ್ಷಗಳು ಹಂಚಿಕೆಯಾಗಿದ್ದು, ಇದರಲ್ಲಿ ಮುಂದುವರಿದ 31 ಕಾಮಗಾರಿಗಳಿಗೆ ರೂ. 18.08 ಲಕ್ಷ ಹಾಗೂ ಹೊಸದಾದ 43 ಕಾಮಗಾರಿಗಳಿಗೆ 40.50 ಲಕ್ಷ ಅನುದಾನದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಮಾರ್ಚ್ 2012ರ ಅಂತ್ಯದವರೆಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಪಿ.ಎಮ್.ಜಿ.ಎಸ್.ವೈ. ರಸ್ತೆ ಕಳಪೆ ಕಾಮಗಾರಿ

141 (361) ಶ್ರೀ ಸಿದ್ದುಸವದಿ (ತೇರದಾಳ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೇರದಾಳ ಮತಕ್ಷೇತ್ರದಲ್ಲಿ ಪ್ರಾರಂಭಿಸಲಾದ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಆಗುತ್ತಿರುವ ವಿಳಂಬ ಮತ್ತು ಕಳಪೆ ಗುಣಮಟ್ಟದ ಕೆಲಸ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ?

ಆ) ತೇರದಾಳ ಕ್ಷೇತ್ರದಲ್ಲಿ ಸದರಿ ಯೋಜನೆಯಲ್ಲಿ ಮಂಜೂರಾದ ರಸ್ತೆಗಳು ಯಾವುವು ? ಪ್ರತಿ ರಸ್ತೆ ಕಾಮಗಾರಿಯು ಯಾವ ಹಂತದಲ್ಲಿದೆ ?

ಇ) ರಬಕವಿ–ಸಸಾಲಟ್ಟಿ ರಸ್ತೆ ಕಾಮಗಾರಿ ಎರಡು ವರ್ಷಗಳಾದರೂ ಮುಗಿದಿಲ್ಲದಿರುವುದಕ್ಕೆ ಕಾರಣಗಳೇನು, ಗುತ್ತಿಗೆದಾರನಿಗೆ ಎಷ್ಟು ಹಣ ಪಾವತಿಸಲಾಗಿದೆ, ಯಾವ ಕ್ರಮ ಕೈಗೊಳ್ಳಲಾಗಿದೆ ?

ಈ) ಅಸಂಗಿಯಿಂದ ಕುಲ್ಲಳ್ಳಿ ರಸ್ತೆ ಮೂರು ವರ್ಷಗಳಲ್ಲಿ ಸಂಪೂರ್ಣ ಹಾಳಾಗಿದ್ದು, ಗುತ್ತಿಗೆದಾರನ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ? ಮಧ್ಯದಲ್ಲಿ ಸಿ.ಡಿ. ಕಟ್ಟದೆ ರಸ್ತೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಬಂದಿದೆ. ಕೆ.ಎನ್-01-23 ಸಸಾಲಟ್ಟಿ, ತೀನಪಾಟಾ ರಸ್ತೆ ರೈತ ತಕರಾರು, ಖಡಿ ಸಂಗ್ರಹಣೆಗೆ ವಿರೋಧ, ಗುತ್ತಿಗೆದಾರರ ಅನಾರೋಗ್ಯ ಕಾರಣಗಳಿಂದ ವಿಳಂಬವಾಗಿದೆ.

ವಿಳಂಬಕ್ಕಾಗಿ ಕಾಮಗಾರಿ ಪೂರ್ಣಗೊಳಿಸುವರೆಗೆ ನಿಯಮಾನುಸಾರ ದಂಡ ವಿಧಿಸಲಾಗುತ್ತಿದೆ.

ಪ್ರಸ್ತುತ ಡಾಂಬರೀಕರಣ ಕೆಲಸ ಪ್ರಗತಿಯಲ್ಲಿದ್ದು, ಪ್ರತಿ ಹಂತದಲ್ಲಿ ಗುಣಮಟ್ಟ ಕಾಪಾಡಲಾಗುತ್ತಿದೆ.

ಈವರೆಗೆ ಪೂರ್ಣಗೊಂಡ ಯಾವುದೇ ಕಾಮಗಾರಿಗಳಲ್ಲಿ ಗುಣಮಟ್ಟ ಕಳಪೆಯಾಗಲು ಅವಕಾಶ ನೀಡಿರುವುದಿಲ್ಲ.

ರಾಜ್ಯ ಗುಣನಿಯಂತ್ರಣ ಮೇಲ್ವಿಚಾರಕರು (ಎಸ್.ಕ್ಯೂ.ಎಮ್.) ಕಾಮಗಾರಿಗಳನ್ನು ಪರಿಶೀಲಿಸುತ್ತಿದ್ದು, ಪ್ರತಿ ಹಂತದಲ್ಲಿ ಗುಣಮಟ್ಟ ಪರೀಕ್ಷೆ ನಡೆಸಲಾಗಿದೆ.

ಆ) ತೇರದಾಳ ಮತಕ್ಷೇತ್ರದಲ್ಲಿ ಪಿಎಂಜಿಎಸ್‌ವೈಯಡಿ ಇಲ್ಲಿಯವರೆಗೆ ಮಂಜೂರಾದ ರಸ್ತೆಗಳ ವಿವರ ಈ ಕೆಳಕಂಡಂತಿದೆ.

ಫೇಸ್ 2ರಲ್ಲಿ.

1) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01-04 ರಡಿ ಸಾವಲಗಿ-ಜಮಖಂಡಿ ರಸ್ತೆಯು 2.5 ಕಿ.ಮೀ. ಉದ್ದವಿದ್ದು, ಆಗಸ್ಟ್-2003 ರಲ್ಲಿ (ಉದ್ದ 1.3 ಕಿ.ಮೀ.) ಪೂರ್ಣಗೊಂಡಿದೆ ಹಾಗೂ

2) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01-06 ರಡಿ ರಬಕವಿ-ಹಳ್ಳಿಂಗಳ್ಳಿ ಜನವರಿ-2004 ರಲ್ಲಿ (ಉದ್ದ 5.5 ಕಿ.ಮೀ.) ಪೂರ್ಣಗೊಂಡಿದೆ.

ಫೇಸ್ 5 ರಲ್ಲಿ

3) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01-11 ರಲ್ಲಿ ಯಲ್ಲಟ್ಟಿ-ಕುಲ್ಲಳ್ಳಿಯಿಂದ ಗೊಂಬಿಗುಡ್ಡ, ಅಸಂಗಿ ಮಾರ್ಚ್-2008 ರಲ್ಲಿ (ಉದ್ದ 5.05 ಕಿ.ಮೀ.) ಪೂರ್ಣಗೊಂಡಿದೆ.

ಫೇಸ್ 7 ರಡಿಯಲ್ಲಿ

4) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01–25 ರಡಿ ಶಿರಗುಪ್ಪ–ಯಲ್ಲಟ್ಟಿ (ಉದ್ದ 12.98 ಕಿ.ಮೀ.) ಪೂರ್ಣಗೊಂಡಿದೆ.

5) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01–23 ರಡಿ ಸಸಾಲಟ್ಟಿ–ತೀನಪಾಟಾ (13.67 ಕಿ.ಮೀ.) ಡಾಂಬರೀಕರಣ ಪ್ರಗತಿಯಲ್ಲಿದೆ.

ಇ) ಕೆ.ಎನ್.–01–23 ಸಸಾಲಟ್ಟಿ, ತೀನಪಾಟಾ ರಸ್ತೆ ರೈತರ ತಕರಾರು, ಖಡಿ ಸಂಗ್ರಹಣೆಗೆ ವಿರೋಧ, ಗುತ್ತಿಗೆದಾರರ ಅನಾರೋಗ್ಯದ ಕಾರಣಗಳಿಂದ ವಿಳಂಬವಾಗಿದೆ.

ಟೆಂಡರ್ ಮೊತ್ತ ರೂ. 426.11 ಲಕ್ಷ ಇದ್ದು ಇಲ್ಲಿಯವರೆಗೆ ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತ ರೂ. 204.30 ಲಕ್ಷಗಳು.

ಈಗ ಡಾಂಬರೀಕರಣ ಕೆಲಸ ಪ್ರಗತಿಯಲ್ಲಿದ್ದು, ವಿಳಂಬಕ್ಕಾಗಿ ಕಾಮಗಾರಿ ಪೂರ್ಣಗೊಳಿಸುವರೆಗೆ ನಿಯಮಾನುಸಾರ ದಂಡ ವಿಧಿಸಲಾಗುತ್ತಿದೆ.

ಈ) ಈ ರಸ್ತೆಯು ಪೂರ್ತಿಯಾಗಿ ನೀರಾವರಿ ಜಮೀನುಗಳ ಹಾಗೂ ಜವುಗು ಜಮೀನುಗಳ ಮುಖಾಂತರ ಹೋಗುತ್ತಿದ್ದು ಭೂಮಿಯ ಮಟ್ಟವು ಒಂದು ಬದಿಗೆ ಹೆಚ್ಚಿದ್ದು ಇನ್ನೊಂದು ಬದಿಗೆ ತಗ್ಗಾಗಿರುವುದು. ಹಲವೆಡೆ ಬಸಿನೀರು ಸತತವಾಗಿ ರಸ್ತೆಗೆ ಬಂದು ರಸ್ತೆ ಸ್ಥಿತಿ ಸರಿಯಾಗಿ ಉಳಿಯುತ್ತಿಲ್ಲ, ಅಲ್ಲದೇ ಸಂಬಂಧಪಟ್ಟ ಗುತ್ತಿಗೆದಾರರು ಸಕಾಲದಲ್ಲಿ ನಿರ್ವಹಣೆ ಮಾಡಿರಲಿಲ್ಲ. ಈಗ ಪೂರ್ತಿ ರಿಪೇರಿ ಮಾಡಿ ಸುಸ್ಥಿತಿಗೆ ತರಲಾಗಿದೆ. ಕಿ.ಮೀ. 2.3 ರಲ್ಲಿ ಕಾಲುವೆಯ ಬಸಿನೀರಿನ ಸಲುವಾಗಿ ಸೇತುವೆಯ ನಿರ್ಮಾಣ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾರ್ಗಸೂಚಿಯ ಪ್ರಕಾರ ಮೂಲ ಅಂದಾಜು ಪತ್ರಿಕೆಯಲ್ಲಿ ಸೇರಿಸಲು ಸಾಧ್ಯವಾಗಿರಲಿಲ್ಲ. ಆದರೆ ಇನ್ನು ಮುಂದಿನ ಯೋಜನೆಗಳಲ್ಲಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಟೆಂಡರ್ ಕರೆದು ಪೂರ್ಣಗೊಳಿಸಲಾಗುವುದು.

ಚಳ್ಳಕೆರೆ ಕ್ಷೇತ್ರಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹಣ ಬಿಡುಗಡೆ

143 (141) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಳ್ಳಕೆರೆ ವಿಧಾನಸಭೆ ಕ್ಷೇತ್ರಾದ್ಯಂತ ಈ ವರ್ಷ ಭೀಕರ ಬರ ಬಂದಿರುವ ಹಿನ್ನೆಲೆಯಲ್ಲಿ ಪರಿಹಾರಾರ್ಥವಾಗಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಎಲ್ಲೆಲ್ಲಿ ಕೈಗೊಳ್ಳಲಾಗಿದೆ (ಗ್ರಾಮ ಪಂಚಾಯಿತಿವಾರು